## 3ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು.

## Spl. C. No. 23 /2014

| | | |
|---|---|---|
| ಹೆಸರು | ಲಕ್ಷ್ಮಯ್ಯ | ಪ್ರಾಸಾ.1 |
| ತಂದೆಯ ಹೆಸರು | ಹನುಮಯ್ಯ | ಚಾಸಾ.1 |
| ವಯಸ್ಸು | 68 ವರ್ಷ | |
| ಉದ್ಯೋಗ | ಕೂಲಿ | |
| ವಾಸ | ಹೊನ್ನೆನಹಳ್ಳಿ | |

**ದಿನಾಂಕಃ 20.02.2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಮಾನ್ಯ ವಿಶೇಷ ಅಭಿಯೋಜಕರು ಜಿ ಯು ರವರಿಂದಃ**

ಆರೋಪಿಗಳನ್ನು ನಾನು ನೋಡಿದ್ದೇನೆ. ಅವರು ಗೊತ್ತು. ನಾನು ಸುರುಪುರಯ್ಯರವರ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದೇನೆ. ಅಲ್ಲಿ ಕೂಲಿ ಕೆಲಸ ಮಾಡುತ್ತೇನೆ. ಸಮಾರು 3-4 ವರ್ಷಗಳ ಹಿಂದೆ ನಾನು ಹುರುಳಿಕಾಳು ಹಾಕಲು ಬೇಲಿ ಕೀಳುತ್ತಿದ್ದೆ. ಮಹದೇವಯ್ಯ ಬಂದು ತೆಂಗಿನ ಕಾಯಿ ಕಿತ್ತರು. ನಾನು ಯಾಕಪ್ಪ ಕೀಳುತ್ತಿದ್ದಿರಿ ಎಂದು ಕೇಳಿದೆ. ನಾನು ಇಲ್ಲಿ ಕಾವಲು ಇದ್ದೇನೆ ಎಂದು ಹೇಳಿದೆ. ಅವರು ನೀನು ಯಾರು ಕೇಳಲು ಎಂದು ಮಾದಿಗ , ಹೊಲೆಯ ಎಂದು ಬೈದು ಬಲ ಎದೆಗೆ ಹೊಡದರು. ನಾನು ಕೆಳಕ್ಕೆ ಬಿದ್ದೆ. ನನಗೆ ಜ್ಞಾನ ಇರಲಿಲ್ಲ, ಪಕ್ಕದ 5-6 ಜನರು ಬಂದು ಬಿಡಿಸಿಕೊಂಡರು. ಚಂದ್ರಣ್ಣ ಬಂದಿದ್ದರು. ತುಮಕೂರು ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿದರು. ಚಂದ್ರಪ್ಪರವರು ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದರು.

ಸಾಕ್ಷಿ ಮುಂದುವರೆದು ಯಾರು ಯಾರು ಕರೆದುಕೊಂಡು ಬಂದಿದ್ದರು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು 2- 3 ದಿನ ಆಸ್ಪತ್ರೆಯಲ್ಲಿದ್ದೆ. ನಾನು ಪೊಲಿಸರಿಗೆ ದೂರು ನೀಡಿದ್ದೇನೆ. ನಾನು ಹೆಬ್ಬೆಟ್ಟು ಹಾಕುತ್ತೇನೆ. ದೂರಿಗೆ ನನ್ನ ಹೆಬ್ಬೆಟ್ಟು ಹಾಕಿದ್ದೇನೆ. ಸಾಕ್ಷಿಯು ದೂರನ್ನು ಗುರುತಿಸಿದ್ದು ಅದನ್ನು ನಿಪಿ.1 ಮತ್ತು ಸಾಕ್ಷಿಯ ಎಡ ಹೆಬ್ಬೆಟ್ಟಿನ ಗುರುತನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಪೊಲೀಸರು ನನ್ನ ಹೇಳಿಕೆಯನ್ನು ಪಡೆದಿದ್ದಾರೆ. ನಾನು ಆದಿ ಕರ್ನಾಟಕ ಜನಾಂಗಕ್ಕೆ ಸೇರಿದವನು. ಆರೋಪಿಗಳು ಲಿಂಗಾಯುತ ಜನಾಂಗಕ್ಕೆ ಸೇರಿದವರು.

**ಪಾಟೀಸವಾಲಿಗೆ ಸಮಯಕೋರಿದ್ದು ನೀಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ

3ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.

**ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಅನುಮತಿಯ ಮೇರೆಗೆಮುಂದುವರೆದ ಮುಖ್ಯ ವಿಚಾರಣೆ ಃ ಮಾನ್ಯ ವಿಶೇಷ ಅಭಿಯೋಜಕರು ಜಿ ಯು ರವರಿಂದಃ</u>**

ನ್ಯಾಯಾಲಯಂದ ಮುಂದೆ ಇರುವ ತೆಂಗಿನ ಕಾಯಿಯನ್ನು ತೋರಿಸಿದಾಗ ಸಾಕ್ಷಿಯು ನಮ್ಮ ತೋಟದ್ದೇ ತೆಂಗಿನ ಕಾಯಿ ಎಂದು ನುಡಿಯುತ್ತಾರೆ. ಅದನ್ನು ಮೂ ಮಾ.1 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಬಿದಿರಿನ ಗಳುವನ್ನು ಗುರುತಿಸಿ ಅದನ್ನು ರೋಟಿ ಎಂದು ಹೇಳಿದ್ದು ಅದನ್ನು ಮೂ ಮಾ.2 ಎಂದು ಗುರುತಿಸಲಾಯಿತು.

**ಪಾಟೀಸವಾಲು ಶ್ರೀ ಎ ಆರ್ ಯು ವಕೀಲರಿಂದ**

ಚಾಸಾ.6ರವರ ಮುಖ್ಯ ವಿಚಾರಣೆಯ ನಂತರ ಪ್ರಾಸಾ.1ರವರ ಪಾಟೀಸವಾಲು ಮಾಡುವುದಾಗಿ ಆರೋಪಿ ಪರ ವಕೀಲರು ಕಾಲವಕಾಶ ಕೋರಿದ್ದು, ಕಲಂ.231(2)ರಂತೆ ಕಾಲಾವಕಾಶ ನೀಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ

3ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.